ಬೆಳೆಸುವುದರಲ್ಲಿ ಕನ್ನಡದ್ದೇ ನಿರ್ಣಾಯಕ ಪಾತ್ರ ಅನ್ನಿಸುತ್ತೆ ನನಗೆ. ಒಂದು ಸಾಹಿತ್ಯ ಪರಂಪರೆಯನ್ನೇ ಹೆಣ್ಣೋಟದಲ್ಲಿ ಮರುಓದುವ, ಬೆಲೆಗಟ್ಟುವ, ಆ ಮೂಲಕ ಸಾಹಿತ್ಯ ಪರಂಪರೆಯ ಬದಲಾದ ಭಿತ್ತಿ ಮತ್ತು ಸ್ವರೂಪವನ್ನು ಗುರುತಿಸುವ ಪ್ರಯತ್ನಗಳು ಕನ್ನಡದಲ್ಲಿ ನಡೆಯುತ್ತಿರುವ ಗಾಂಭೀರ್ಯ ಮತ್ತು ಪ್ರಮಾಣದಲ್ಲಿ ಬೇರೆ ಕಡೆ ನಡೆಯುತ್ತಿಲ್ಲ.

**ವೀಣಾ:** ನಾನು ವಿಮರ್ಶೆಯನ್ನ ಬಹಳ ಆಳವಾಗಿ ಓದುವವಳಲ್ಲ. ಮರಾಠಿ, ಬೆಂಗಾಲಿಯಲ್ಲೂ ಸಾಕಷ್ಟು ಬರವಣಿಗೆಗಳು ಬಂದಿವೆ. ಮರಾಠಿಯಲ್ಲಿ ಶರ್ಮಿಳಾ ರೇಗೆಯವರ ಬರವಣಿಗೆಯ ಬಗ್ಗೆ ನನಗೆ ಮೆಚ್ಚುಗೆಯಿದೆ. ಕನ್ನಡದ ಮಟ್ಟಿಗೆ ಅಕ್ಕನಿಂದ ಹಿಡಿದು ಒಂದು ಗಟ್ಟಿಯಾದ ಸ್ತ್ರೀವಾದಿ ತಾತ್ವಿಕತೆಯ ಪರಂಪರೆಯೇ ಬೆಳೆದು ಬಂದಿದೆ. ಅದು ಶಕ್ತಿಯುತವಾಗಿ ಮುಂದುವರಿದಿರುವುದು ಸಹಜವಾಗಿಯೇ ನಮಗೆ ಹೆಮ್ಮೆ ತರುತ್ತದೆ.

**ಆಶಾ:** ನಿಮ್ಮ ಕೃತಿಗಳನ್ನ ಕುರಿತಂತೆ ಸರಿಯಾದ ಅಧ್ಯಯನ, ವಿಶ್ಲೇಷಣೆ ಆಗಿದೆ ಅಂತ ಅನ್ನಿಸುತ್ತಾ?

**ವೀಣಾ:** ಸಾಮಾನ್ಯವಾಗಿ ಯಾರಿಗೂ ಅವರ ಕೃತಿಗಳ ಬಗ್ಗೆ ಬಂದ ವಿಮರ್ಶೆಯ ಬಗ್ಗೆ ಸಮಾಧಾನ ಇರುವುದಿಲ್ಲ. ಆದರೆ ನನ್ನ ಕೃತಿಗಳ ಬಗ್ಗೆ ಬಂದ ವಿಮರ್ಶೆ ಸಮರ್ಪಕವಾಗಿದೆ ಅನ್ನಿಸುತ್ತದೆ.

**ಆಶಾ:** ನಾನು ಈ ಪ್ರಶ್ನೆಯನ್ನ ಕೇಳಿದ್ದು, ಅದರ ನಿಜವಾದ ಅರ್ಥದಲ್ಲಿ ಆಧುನಿಕ ಕನ್ನಡದಲ್ಲಿ ಸ್ತ್ರೀವಾದಿ ಬರವಣಿಗೆಯ ಉದ್ಘಾಟಕರು ನೀವು. ಆ 'ಮೊದಲಗಿತ್ತಿ'ಯ ಹೆಗ್ಗಳಿಕೆಯನ್ನ ಕೊಡಬೇಕಾದ ಕಾಲದಲ್ಲಿ ನಿಮಗೆ ಕೊಡಲಿಲ್ಲ ಎನ್ನುವ ಹಿನ್ನೆಲೆಯಲ್ಲಿ.

**ವೀಣಾ:** ಈ ದೃಷ್ಟಿಯಿಂದ ಹೌದು. ಆದರೆ ಆ ಕಾಲದಲ್ಲಲ್ಲದಿದ್ದರೂ ಈ ಕಾಲದಲ್ಲಾದರೂ ಕೊಡುತ್ತಿದ್ದಾರಲ್ಲ ಎನ್ನುವ ಸಮಾಧಾನವಿದೆ.

**ಆಶಾ:** ನನಗನ್ನಿಸುತ್ತೆ, ಆ ಕಾಲದಲ್ಲಿ ನೀವು ಮತ್ತು ಇತರ ಲೇಖಕರ ನಡುವೆ ಒಂದು ಸಂವಾದ ನಡೀತು ಅಂತ. ಮುಖ್ಯವಾಗಿ ದೇಸಾಯಿ, ಅನಂತಮೂರ್ತಿ, ತೇಜಸ್ವಿ, ಲಂಕೇಶ್ ಇವರ ಕತೆಗಳ ಹೆಣ್ಣುಮಕ್ಕಳು ಮತ್ತು ನಿಮ್ಮ ಕತೆಗಳ ಹೆಣ್ಣುಮಕ್ಕಳನ್ನ ಒಟ್ಟಿಗೇ ಇಟ್ಟು ನೋಡಿದ್ರೆ, ತುಂಬಾ ಇಂಟರೆಸ್ಟಿಂಗ್ ಅನ್ನಿಸುತ್ತೆ ನನಗೆ. ಶತಮಾನಗಳ ದಮನದ ವಿರುದ್ಧ ಆಸ್ಫೋಟಿಸಿದ ಹಾಗೆ ನಿಮ್ಮ ಪಾತ್ರಗಳಿವೆ. ಈ ತನಕ ಕಂಡೂ ಕಾಣದ ಹಾಗೆ, ಅಪವಾದಗಳು, ಅಪರಾಧಗಳು... ಹೀಗೆಲ್ಲಾ ಕಾಣಿಸುತ್ತಿದ್ದ ಹೆಣ್ಣಿನ ಬದುಕಿನ ವ್ಯಾಪಾರಗಳನ್ನು ನಿಮ್ಮ ಪಾತ್ರಗಳು ಒಮ್ಮಿಂದೊಮ್ಮೆಲೇ ಎನ್ನುವಂತೆ, ಧುತ್ತೆಂದು ಲೋಕದ ಎದುರಿಗೆ ನಿಂತು 'ಈಗೇನ್ ಮಾಡೀರಿ' ಎನ್ನುವಂತೆ ನಿಲ್ಲುತ್ತವೆ. ಅಗ್ನಿಕುವರಿಯರಂತೆ ಕಾಣಿಸುವ ಅವರು, ಬದುಕಿನ ಎಲ್ಲ ದಾರಿಗಳನ್ನೂ ಹುಡುಕುತ್ತಿದ್ದ, ಬಯಸುತ್ತಿದ್ದ ಎಲ್ಲವನ್ನೂ ಹಕ್ಕಿನಿಂದ, ಆಸೆಯಿಂದ, ಆರ್ತತೆಯಿಂದ, ಅಪ್ಪಿಕೊಳ್ಳುವ ಹಾಗೆ ಕಾಣಿಸುತ್ತವೆ. ಪ್ರಶ್ನಿಸ್ತಾನೇ, ಧಿಕ್ಕರಿಸ್ತಾನೇ ಹೊಸದಾರಿಯ ಕಡೆಗೆ ಅವು ಮುಖ ಮಾಡುತ್ತವೆ. ಆದರೆ, ಇದಕ್ಕೆ ಪೂರಕವಾಗಿ ಬರೆದವರು ನನ್ನ ಪ್ರಕಾರ ದೇಸಾಯರು ಮತ್ತು ಲಂಕೇಶರು. ಹೊಸ ಹೆಣ್ಣನ್ನು ಇವರಿಬ್ಬರೂ ತಮ್ಮ ಕತೆಗಳಲ್ಲಿ ಅನಾವರಣ ಮಾಡಿಕೊಳ್ಳುವ ರೀತಿ, ಪಡೆದ ಯಶಸ್ಸು ನಿಮ್ಮ ನಾಯಕಿಯರಿಗೆ ಸಿಕ್ಕ ನೈತಿಕ ಬೆಂಬಲದಂತೆಯೇ ಕಾಣಿಸುತ್ತದೆ. ಆದರೆ ಇದೇ ಮಾತನ್ನ ಅನಂತಮೂರ್ತಿಯವರ ಕತೆಗಳ ಬಗ್ಗೆ ಹೇಳುವುದು ಕಷ್ಟ ಅಲ್ಲವೆ? ನಿಮಗೇನನ್ನಿಸುತ್ತೆ?

**ವೀಣಾ:** ಹೌದು. ಹಾಂ, ಆಶಾ... ನಿಮಗೆ ಕಾವ್ಯ–ಕತೆ ಬರೀಬೇಕು ಅನ್ನಿಸಿಲ್ವೆ?

**ಆಶಾ:** ಬರೆದಿದ್ದೀನಿ, ಕೆಲವು ಕವನಗಳನ್ನೂ ಕೆಲವು ಅಪೂರ್ಣ ಕತೆಗಳನ್ನೂ. ಎಂದೋ ಶುರು